ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ,
ಮೈಸೂರು-570017
Telephone No: 0821-2343384

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,CESC, Mysore-570017
**Web Site:** www.cescmysore.org.
**E-Mail:** gmhrd@cescmysore.org

Company Identity Number[CIN]:- **U40109KA2004SGC035177**

ವಿಷಯ: ಚಾವಿಸನಿನಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ಕನಿಷ್ಠ ಖಚಿತ ಪ್ರೋತ್ಸಾಹ ಧನ ರೂ.16,320/-ಗಳಿಂದ ರೂ.17,320/-ಗಳಿಗೆ ಹಾಗೂ ಗೌರವ ಧನವನ್ನು ರೂ.4,000/-ಗಳಿಂದ ರೂ.5,000/-ಗಳನ್ನು ಪಾವತಿಸುವ ಕುರಿತು.

ಉಲ್ಲೇಖ:1.ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ರವರ ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ 505 ಇಇಬಿ 2021(ಭಾಗ-1), ಬೆಂಗಳೂರು ದಿನಾಂಕ:25.11.2022.

2.ಈ ಕಛೇರಿ ಪತ್ರಸಂಖ್ಯೆ:ಚಾವಿಸನಿನಿ/ಆ ಮತ್ತು ಮಾಸಂ/05/ಇ-38291/2022-23/ಸಿವೈಎಸ್ -1834 ದಿನಾಂಕ:16.03.2023.

3.ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ರವರ ಸರ್ಕಾರಿ ಆದೇಶ ಸಂಖ್ಯೆ:ಎನರ್ಜಿ 505 ಇಇಬಿ 2021(ಭಾಗ-1), ಬೆಂಗಳೂರು ದಿನಾಂಕ:07.03.2023.

4.104 ನೇ ಮಂಡಳಿ ಸಭೆಯ ಪತ್ರಸಂಖ್ಯೆ:CESC/CS/BODM/5/2024-CS(Computer No.106720).

******

<u>ಪೀಠಿಕೆ:</u>

ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರುರವರ ದಿನಾಂಕ:25.11.2022ರ ಆದೇಶದನ್ವಯ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಬಿಲ್ ವಿತರಣೆ ಹಾಗೂ ವಸೂಲಾತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಕಾರ್ಯಕ್ಷಮತೆ ಹೆಚ್ಚಿಸುವುದಕ್ಕಾಗಿ, ಗ್ರಾಮ ವಿದ್ಯುತ್ ಪ್ರತಿನಿಧಿಗಳು ಎಸ್ಕಾಂಗಳೊಂದಿಗೆ ಒಡಂಬಡಿಕೆಯನ್ನು(MOU) ಪ್ರತಿ ವರ್ಷ ಮಾಡಿಕೊಳ್ಳುವ ಮತ್ತು ಕಾಲಕಾಲಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ನವೀಕರಿಸುವ ಹಾಗೂ ಮಾನ್ಯ ನ್ಯಾಯಾಲಯಗಳಲ್ಲಿ ಬಾಕಿ ಇರುವ ಮೇಲ್ಮನವಿ/ನ್ಯಾಯಾಲಯ ಪ್ರಕರಣಗಳಲ್ಲಿ ಎಸ್ಕಾಂಗಳ ವತಿಯಿಂದ ವಾದಿಸುವ ಹಕ್ಕನ್ನು ಕಾಯ್ದಿರಿಸಿಕೊಳ್ಳುವ ಷರತ್ತಿಗೊಳಪಟ್ಟು ದಿನಾಂಕ:25.11.2022ರಿಂದ ಅನ್ವಯವಾಗುವಂತೆ ಉಲ್ಲೇಖ(1)ರ ಆದೇಶವನ್ನು ಉಲ್ಲೇಖ(2) ರಲ್ಲಿ ಈಗಾಗಲೇ ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿರುವುದನ್ನು ಉಲ್ಲೇಖ(4) ರ ಮಂಡಳಿ ಸಭೆಯಲ್ಲಿ ಅನುಸಮರ್ಥಿಸಲಾಗಿರುತ್ತದೆ.

ದಿನಾಂಕ:07.03.2023 ರಿಂದ ಅನ್ವಯವಾಗುವಂತೆ ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ಕನಿಷ್ಠ ಖಚಿತ ಪ್ರೋತ್ಸಾಹ ಧನವನ್ನು ರೂ.16,320/-ಗಳಿಂದ ರೂ.17,320/-ಗಳಿಗೆ ಹಾಗೂ ಗೌರವ ಧನವನ್ನು ರೂ.4,000/-ಗಳಿಂದ ರೂ.5,000/-ಗಳಿಗೆ ಉಲ್ಲೇಖ(3) ರಲ್ಲಿ ಹೆಚ್ಚಿಸಿ ಆದೇಶಿಸಿರುವುದನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳುವ ಸಂಬಂಧ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ಸೂಚನೆಯಂತೆ 104 ನೇ ಮಂಡಳಿ ಸಭೆಗೆ ಪ್ರಸ್ತಾವನೆಯನ್ನು ಮಂಡಿಸಲಾಗಿ, ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ಕನಿಷ್ಠ ಖಚಿತ ಪ್ರೋತ್ಸಾಹ ಧನವನ್ನು ಹೆಚ್ಚಿಸುವ ಸಂಬಂಧ ಉಲ್ಲೇಖ(4)ರ ಮಂಡಳಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯದಂತೆ ಈ ಕೆಳಕಂಡಂತೆ ಆದೇಶಿಸಿದೆ.

## <u>ಆದೇಶ</u>

ಕ್ರಮಾಂಕ:ಸೆಸ್ಕ/ಆ&ಮಾ.ಸಂ/03/2023-24/ Cys-1641 ದಿನಾಂಕ: 04 MAR 2024

ಗ್ರಾಮ ವಿದ್ಯುತ್ ಪ್ರತಿನಿಧಿಗಳಿಗೆ ಕನಿಷ್ಠ ಖಚಿತ ಪ್ರೋತ್ಸಾಹ ಧನವನ್ನು ರೂ.16,320/-ಗಳಿಂದ ರೂ.17,320/-ಗಳಿಗೆ ಹಾಗೂ ಗೌರವ ಧನವನ್ನು ರೂ.4,000/-ಗಳಿಂದ ರೂ.5,000/-ಗಳಿಗೆ ದಿನಾಂಕ:07.03.2023 ರಿಂದ ಅನ್ವಯವಾಗುವಂತೆ ಹೆಚ್ಚಿಸಿ ಪಾವತಿಸಲು ಆದೇಶಿಸಿದೆ.

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ. |

ಆದೇಶದ ಮೇರೆಗೆ

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾಸಂ)
ಚಾವಿಸನಿನಿ., ಮೈಸೂರು.

ಪ್ರತಿಗಳು:

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
- ಕಂಪನಿ ಕಾರ್ಯದರ್ಶಿ, ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ/ಲೆಕ್ಕಾಧಿಕಾರಿ(ಆಂ.ಪ),ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್. ಶಾಖೆ,) ನಿಗಮ ಕಛೇರಿ, ನಿಗಮದ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು/ನಿರ್ದೇಶಕರು(ಹಣಕಾಸು) ರವರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ)/ ನಿರ್ದೇಶಕರು(ಹಣಕಾಸು) ರವರ ಗಮನಕ್ಕೆ ತರುವಂತೆ ಕೋರಿ.
- ಮುಖ್ಯ ಕಡತ.